1	2	3
BW15a	Link Road fromMalleswaram circle to Seshadripuram Road	0.8
BW16a	Kumarakrupa Road-from Race course to K.K.Guest House	0.7
BW20a	Sagar Talkies to Central Jail Kanakadasa Road	0.7
BW17a	II Cross, Gandhinagar to Central Jail	0.7
BW22a	Anandarao Circle to KG Circle	0.6

ಬೆಂಗಳೂರು ಕೇಂದ್ರ ಕಾರಾಗೃಹ ಸ್ಥಳಾಂತರ

2850(3632) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ಹೊಸೂರು ರಸ್ತೆಯಲ್ಲಿ ನಿರ್ಮಿಸಿರುವ ಹೊಸ ಕಾರಾಗೃಹಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಈ ಕೇಂದ್ರ ಕಾರಾಗೃಹವನ್ನು ಅಪೂರ್ಣವಾಗಿ ಯಾವಾಗ ಸ್ಥಳಾಂತರಿಸಲಾಗುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು)

ಅ) ಸನ್ಮಾನ್ಯ ಮುಖ್ಯಮಂತ್ರಿಗಳು ಗಾಂಧೀನಗರ ಬೆಂಗಳೂರು ಕೇಂದ್ರ ಕಾರಾಗೃಹವನ್ನು ಪೂರ್ಣ ಪ್ರಮಾಣದಲ್ಲಿ ಪರಪ್ಪನ ಅಗ್ರಹಾರ ನೂತನ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವುದಾಗಿ ಆಯವ್ಯಯ ಭಾಷಣದಲ್ಲಿ ಸೂಚಿಸಿದಂತೆ ಅವಶ್ಯಕವಾದ ಕಾಮಗಾರಿಗಳನ್ನು ಅದ್ಯತೆಯ ಮೇಲೆ ಲೋಕೋಪಯೋಗಿ ಇಲಾಖೆಯಿಂದ ತೆಗೆದುಕೊಳ್ಳಲಾಗಿದೆ. ಬಂದಿಗಳನ್ನು ಕೆಲಸದಲ್ಲಿ ನಿಯೋಜಿಸಲು ಅವಶ್ಯಕವಾಗಿ ವರ್ಕ್‌ಶೆಡ್ ನಿರ್ಮಾಣ, ಬ್ಯಾಂಡಿಸಾ ಮೆಶೀನ್ ಷೆಡ್ ನಿರ್ಮಾಣ, ನೀರಿನ ಸೌಲಭ್ಯ, ಆರ್.ಸಿ.ಸಿ. ಓವರ್‌ಹೆಡ್ ಟ್ಯಾಂಕ್ ಬಯಲು ರಂಗಮಂದಿರ, 6 ಚಿಕ್ಕ ಕಾವಲು ಗೋಪುರಗಳ ನಿರ್ಮಾಣ, ಸಿ.ಸಿ.ಟಿ.ವಿ.ಸಿಸ್ಟಂ, ವೈರ್‌ಫೆನ್ಸ್ ಪಬ್ಲಿಕ್ ಅಡ್ರಸ್ ಸಿಸ್ಟಮ್ ಇತ್ಯಾದಿ 316.93 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು ಕೆಲಸ ಭರದಿಂದ ಸಾಗುತ್ತಿದೆ.

ಆ) ಪ್ರಸಕ್ತ ಸಾಲಿನ ಡಿಸೆಂಬರ್‌ಕೊನೆಯ ವಾರದಲ್ಲಿ ಸ್ಥಳಾಂತರಿಸಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ.

ದೇವನಹಳ್ಳಿ ಬಳಿ ನಿರ್ಮಿಸಲಾಗುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

2851 (3638) ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಮೂಲ ಭೂತ ಸೌಲಭ್ಯ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ದೇವನಹಳ್ಳಿ ನಿರ್ಮಿಸಲಾಗುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಟೆಂಡರ್ ನೀಡುವ ಕಾರ್ಯ ಮುಕ್ತಾಯವಾಗಿದೆಯೆ?